**ಪಿ.ಡಬ್ಲೂ. 1**

ಇಂದು ದಿಃ **05.12.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ ಕೆ ಎಂ ವಕೀಲರಿಂದ.**

1. ನಾನು ಪ್ಬ್ರುವರಿ 2020 ರಲ್ಲಿ ಆರೋಪಿಗೆ ಹಣ ನೀಡಿರುತ್ತೇನೆ. ಸದರಿ ಹಣವನ್ನು ನಾನು ಮಾರ್ಚ 2023 ರಲ್ಲಿ ಆರೋಪಿಗೆ ಮರಳಿ ಕೊಡಲು ಕೇಳಿದ್ದೆ ಎಂದರೆ ಸರಿ. ಸದರಿ ಮೂರು ವರುಷ ಯಾವ ಕಾರಣಕ್ಕೆ ಹಣ ಕೇಳಲಿಲ್ಲ ಎಂದರೆ ಸಾಕ್ಷಿಯು ಆಗ ಕೇಳಿದ್ದೆ ಅದರೇ ಆರೋಪಿ ಕೊವಿಡ ಹಾಗೂ ಲಾಕಡೌನ ಅಗಿದೆ ಎಂದು ಕೊಟ್ಟಿರಲಿಲ್ಲ ಎಂದು ಹೇಳಿರುತ್ತಾರೆ. 2023 ರಲ್ಲಿ ಲಾಕಡೌನ ಇರಲಿಲ್ಲ ಎಂದರೆ ಸರಿ. ನನ್ನ ನೊಟಿಸನಲ್ಲಿ ನಾನು ಆರೋಪಿಗೆ 2023 ಮಾರ್ಚ ತಿಂಗಳಲ್ಲಿ ಬೆಟಿಯಾಗಿದ್ದಾಗ ಆತ ಲಾಕಡೌನ ಇದೆ ಎಂದು ಹೇಳಿ ಸ್ವಲ್ಪ ದಿನ ಕಾಯಿರಿ ಎಂದು ಹೇಳಿ ಎಂದು ಬರೆಸಿದ್ದೆನೆ ಎಂದರೆ ಸರಿ. ಆರೋಪಿ ಜುಲೈ 1 ನೇ ವಾರದಲ್ಲಿ ನನಗೆ ಚೆಕ್ಕನ್ನು ನೀಡಿರುತ್ತಾರೆ. ಆರೋಪಿ ನನಗೆ ಚೆಕ್ಕು ಕೋಡುವ ಕಾಲಕ್ಕೆ ಕಾಲ ವಿಳಂಬವಾಗಿದ್ದು ಸದರಿ ಹಣವನ್ನು ನಾನು ಪಡೆಯಲು ಅರ್ಹನಿಲ್ಲ ಎಂದರೆ ಸಾಕ್ಷಿ ಆರೋಪಿ ಈ ಮೊದಲು ನನಗೆ ಸಿಕ್ಕಿರಲಿಲ್ಲ ಹಾಗೂ ಸದರಿ ವ್ಯವಹಾರದ ಮಧ್ಯಸ್ಥರಾಗಿದ್ದ ಅಜಯಕುಮಾರ ಆಯಿ ಕರೆದುಕೊಂಡು ಹೊದಾಗ ಆರೋಪಿ ನನಗೆ ಚೆಕ್ಕ

ನೀಡಿರುತ್ತಾರೆ ಎಂದು ಹೇಳುತ್ತಾರೆ. ನಾನು ಆಯಿಯವರನ್ನು ಕರೆದುಕೊಂಡು ಹೋಗಿ ಆರೋಪಿ ಮೇಲೆ ಒತ್ತಡ ಹಾಕಿ ಚೆಕ್ಕ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಣ ಕೊಟ್ಟ ದಿನದಿಂದ ಆರೋಪಿ ಚೆಕು ಕೊಟ್ಟ ದಿನಕ್ಕೆ ಕಾಲದ ಪರಿಮಿತಿ ಮುಗಿದಿದ್ದರಿಂದ ನನಗೆ ಹಣ ವಾಪಾಸ್ಸು ಕೇಳುವ ಹಕ್ಕು ಇಲ್ಲ ಎಂದರೆ ಸರಿಯಲ್ಲ.

2. ನನ್ನ ನೊಟೀಸ್ಸನಲ್ಲಿ ಹಾಗೂ ದೂರಿನಲ್ಲಿ ಆರೋಪಿ ಮೂರು ಮರಷಗಳ ಕಾಲ ಸಿಕ್ಕಿಲ್ಲ ಹಾಗೂ ಮೂರು ವರುಷದ ನಂತರ ಅಜಕುಮಾರ ಅಯಿ ಎನ್ನುವವರನ್ನು ಕರೆದುಕೊಂಡು ಹೋದ ಮೇಲೆ ಚೆಕ್ಕ ಕೊಟ್ಟರು ಎನ್ನುವ ವಿಚಾರ ಬರೆಸಿಲ್ಲ ಕಾರಣ ಅದನ್ನು ಬರೆಸುವ ಅವಶ್ಯಕತೆ ಇರಲಿಲ್ಲ.

3. ನಾನು ವ್ಯವಸಾಯ ಮಾಡುತ್ತೇನೆ ನನಗೆ 30-40 ಎಕರೆ ಜಮಿನು ಇರುತ್ತದೆ. ವ್ಯವಸಾಯ ಆದಾಯದ ಹೊರತುಪಡಿಸಿ ಬೇರೆ ಅದಾಯ ಇಲ್ಲ ಎಂದರೆ ಸಾಕ್ಷಿ ನನ್ನ ಬಳಿ ಟ್ರಾಕ್ಟರ ಜೆಸಿಬಿ ಇದ್ದು ಅದರ ಆದಾಯ ಇರುತ್ತದೆ ಎನ್ನುತ್ತಾರೆ. ನನಗೆ ಕೃಷಿಯಿಂದ ಹಾಗೂ ವಾಹನದ ಬಾಡಿಗೆಯಿಂದ ಅದಾಯ ಇತ್ತು ಎಂದು ಹೆಳಲು ಯಾವುದೇ ದಾಖಲು ಹಾಜರು ಮಾಡಿಲ್ಲ ಅದರೇ ಬೆಳೆ ಸಾಲ ತೆಗೆದುಕೊಂಡ ಬಗ್ಗೆ ಹಾಜರು ಮಾಡಿರುತ್ತೇನೆ. ನಾನು ಬೆಳೆ ಸಾಲ

ತೆಗೆದುಕೊಂಡು ಆರೋಪಿಗೆ ಹಣ ನೀಡಿರುತ್ತೇನೆ. ನನಗೆ 4 ಲಕ್ಷ ರೂ. ಬೆಳೆ ಸಾಲ ಹಣ ನೀಡಿರುತ್ತಾರೆ. ಉಳಿದ 4 ಲಕ್ಷ ಹಣವನ್ನು ನಾನು ನನ್ನ ಕೃಷಿ ಅದಾಯದಿಂದ ಕೊಟ್ಟಿರುತ್ತೇನೆ. ನನ್ನ ಬಳಿ 8 ಲಕ್ಷ ಇತ್ತು ಎಂದು ಹೆಳಲು ನಾನು ಬ್ಯಾಂಕ ಸ್ಟೇಟಮಂಟ ಹಾಜರು ಮಾಡಿರುತ್ತೇನೆ. ನಿಪಿ.6 ನನಗೆ ಸಾಲ ಕೊಟ್ಟ ಮಾಹಿತಿ ದಾಖಲೆ ಎಂದರೆ ಸರಿ. ನನ್ನ ಹಣಕಾಸಿನ ವ್ಯವಹಾರದ ಟರ್ನ ಓವರ್ ದಾಖಲೆ ಹಾಜರು ಪಡಿಸಿಲ್ಲ ಅವಶ್ಯವಿದ್ದರೇ ಹಾಜರುಪಡಿಸುತ್ತೇನೆ.

4. ಸಾಮಾನ್ಯವಾಗಿ ಸಾಲ ಕೊಡುವಾಗ ಸದರಿ ಸಾಲವನ್ನು ಮರಳಿ ಕೊಡುವ ಸಾಮರ್ಥ ಇದೆ ಅಥವಾ ಇಲ್ಲ ಎನ್ನುವ ವಿಚಾರವನ್ನು ತಿಳಿದುಕೊಳ್ಳುತ್ತಾರೆ ಎಂದರೆ ಸರಿ. ಆರೋಪಿ ಬಂಗಾರ ಅಂಗಡಿ ನಡೆಸುತಿತದ್ದು ಹಾಗೂ ನನ್ನ ಅಕ್ಕ ತಂಗಿಯರಿಗೆ ಬಂಗಾರ ಕೊಡೆಸುವ ಸಲುವಾಗಿ ಮತ್ತು ಅಜಯಕುಮಾರ ಆಯಿ ರವರ ಮಧ್ಯಸ್ಥರಾಗಿದ್ದರಿಂದ ಆತನಿಗೆ ಹಣ ನೀಡಿರುತ್ತೇನೆ. ಆರೋಪಿ ಬಂಗಾರ ಅಂಗಡಿ ಹಾಗೂ ವ್ಯಾಪಾರ ಮಾಡುತ್ತೇನೆ ಎಂದು ಹೆಳಲು ನಾನು ಯಾವುದೇ ದಾಖಲೆ ಹಾಜರು ಮಾಡಿಲ್ಲ.

5. ಆರೋಪಿ ನನಗೆ ಪರಿಚಯವಿಲ್ಲ ಎಂದರೆ ಸರಿಯಲ್ಲ. ಆರೋಪಿ ನಿಪಿ.1 ನ್ನು ನನಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಚೆಕ್ಕು

**ಪಿ.ಡಬ್ಲೂ. 1**

ಅಜಕುಮಾರ ಅಯಿ ರವರ ಬಳಿ ಇದ್ದು ಸದರಿ ಅಜಯ ಸರಕಾರಿ ನೌಕರನಾಗಿದ್ದು ಈ ಪ್ರಕರಣವನ್ನು ಅಜಯ ರವರು ನನ್ನ ಮೂಲಕ ಹಾಕಿದ್ದಾರೆ ಎಂದರೆ ಸರಿಯಲ್ಲ. ಸದರಿ ಅಜಯ ರವರು ಆತನ ಹೆಂಡತಿ ಮೂಲಕ ಆರೋಪಿ ವಿರುದ್ಧ ಇನ್ನೋಂದು ಚಕಬೌನ್ಸ ಕೇಸ ಹಾಕಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮತ್ತು ಆರೋಪಿ ಮಧ್ಯ ಯಾವುದೇ ಹಣಕಾಸಿನ ವ್ಯವಹಾರ ಆಗಿಲ್ಲ ಅಜಯಕುಮಾರ ಸಹಾಯ ಮಾಡಲು ನಾನು ಈ ಸುಳ್ಳು ದೂರು ಸಲ್ಲಿಸಿದ್ದೆನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು , ನೀಡಲಾಯಿತು.

(**ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು**).

ಓ ಹೇ ಕೇ ಸರಿ ಅದೆ,

( **ಆನಂದ ಎಸ್ ಕರಿಯಮ್ಮನವರ**)
4 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಧಾರವಾಡ.